ವಿಷಯ:- ಲಾಲ್‌ಬಾಗ್ ಸಸ್ಯ ತೋಟಕ್ಕೆ ರೋಡ್ ಸ್ವೀಪರ್ ಖರೀದಿ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 23 (80)

ಶ್ರೀ ಯು.ಆರ್.ಸಭಾಪತಿ (ಉಡುಪಿ)

ಮಾನ್ಯ ತೋಟಗಾರಿಕೆ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ

ಅ) ಲಾಲ್‌ಬಾಗ್ ಸಸ್ಯ ತೋಟದಲ್ಲಿಯ ರಸ್ತೆಗಳ ಸ್ವಚ್ಚತೆಯ ಬಗ್ಗೆ ರೋಡ್ ಸ್ವೀಪರ್‌ನ್ನು ಕೊಂಡುಕೊಳ್ಳಲು ಸರ್ಕಾರದವರು ಅನುಮೋದನೆ ನೀಡಿದ್ದಾರೆಯೇ? : ಅನುಮೋದನೆ ನೀಡಿರುವುದಿಲ್ಲ.

ಆ) ಅನುಮೋದನೆ ನೀಡಿಲ್ಲವಾದರೆ ಸರ್ಕಾರದ ಅನುಮತಿಯಿಲ್ಲದೆ ಕೊಂಡುಕೊಂಡಿರುವ ಅಧಿಕಾರಿಗಳ ಮೇಲೆ ಸರ್ಕಾರವು ತೆಗೆದುಕೊಂಡ ಕ್ರಮಗಳೇನು?

ಈ ಖರೀದಿಯ ವಿಷಯವು ಇತ್ತೀಚೆಗೆ ಸರ್ಕಾರದ ಗಮನಕ್ಕೆ ಬಂದಿದೆ. ಯಾವ ಸನ್ನಿವೇಶಗಳಲ್ಲಿ ಈ ಖರೀದಿಯನ್ನು ಮಾಡಲಾಗಿದೆ ಎಂಬ ಬಗ್ಗೆ ಸೂಕ್ತವಾಗಿ ಪರಿಶೀಲಿಸಲಾಗುತ್ತಿದೆ.

ಇ) ರೋಡ್ ಸ್ವೀಪರ್‌ಗೆ ತಗುಲಿದ ವೆಚ್ಚ ವೆಷ್ಟು? ಕೊಂಡುಕೊಂಡು ಆರು ತಿಂಗಳಾದರೂ ಇದನ್ನು ಉಪಯೋಗಸದೆ ಇರುವುದಕ್ಕೆ ಕಾರಣಗಳೇನು ? : ರೋಡ್ ಸ್ವೀಪರ್ ಯಂತ್ರಕ್ಕೆ ರೂ. 6, 53, 640.00 ಗಳು ತಗಲಿದ್ದು, ಚಾಲನೆ ಮಾಡಲು ಒಂದು ಡೈನಾ 900 ಕ್ಯಾಬಿನ್ ಮತ್ತು ಛಾಸಿಗೆ ರೂ. 4, 22, 331.00 ಗಳು ಮತ್ತು ಇತರೆ ಬಿಡಿ ಭಾಗಗಳಿಗೆ ರೂ. 83, 820-00 ಗಳು ತಗಲಿರುತ್ತದೆ ಒಟ್ಟು ಈ ಕಾರ್ಯಕ್ಕೆ ರೂ. 11, 59, 791.00 ಗಳು ವೆಚ್ಚವಾಗಿದೆ ಈ ವಾಹನವನ್ನು ದೆಹಲಿಯಿಂದ ಬೆಂಗಳೂರಿಗೆ ರಸ್ತೆ ಮೂಲಕ ಕಳುಹಿಸಿ ಟ್ರಯಲ್‌ಗಾಗಿ ಕೇವು ದಿವಸಗಳು ಓಡಿಸಿದ ಮೇಲೆ ಎಂಜಿನ್ ಸಿಲೆಂಡರ್ ತೊಂದರೆಯಿಂದ ಉಪಯೋಗಿಸಲಾಗಿಲ್ಲ. ಖರೀದಿಸಿದ ಸಂಸ್ಥೆಯು ಸ್ಥಳೀಯ ಶಾಖೆಗೆ ದುರಸ್ತಿಗಾಗಿ ಬಿಡಲಾಗಿದೆ. ದುರಸ್ತಿಯಾದ ತಕ್ಷಣ ಲಾಲ್‌ಬಾಗ್ ಸಸ್ಯತೋಟ ರಸ್ತೆ ಸ್ವಚ್ಚತೆಗಾಗಿ ಉಪಯೋಗಿಸಲಾಗುವುದು.

ಶ್ರೀ ಡಿ. ಟಿ. ಜಯಕುಮಾರ್.
(ತೋಟಗಾರಿಕೆ ರಾಜ್ಯ ಸಚಿವರು)

ವಿಷಯ:- ಕೃಷಿ ಫಾರಂ ನೌಕರರು

ಸಿಂಧನೂರು-ಧಡೆಸೂರು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 24 (87)

ಶ್ರೀ ಕೆ.ವಿರುಪಾಕ್ಷಪ್ಪ (ಸಿಂಧನೂರು)

ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ

ಅ) ರಾಜ್ಯ ಸರ್ಕಾರಕ್ಕೆ ಸೇರಿದ ಸಿಂಧನೂರು ತಾಲ್ಲೂಕಿನ ಧಡೇಸೂರು ಕೃಷಿ ಫಾರಂನಲ್ಲಿ ಖಾಯಂ ಆಗಿ ಕೆಲಸ ಮಾಡುತ್ತಿರುವ ನೌಕರರ ಸಂಖ್ಯೆ ಎಷ್ಟು ? : 12

ಆ) ಈ ನೌಕರರಿಗೆ ಸಾರ್ವತ್ರಿಕ ರಜೆ ಸೌಲಭ್ಯ ಕಲ್ಪಿಸದಿರಲು ಕಾರಣವೇನು ? ಈ ನೌಕರರಿಗೆ ಸಾರ್ವತ್ರಿಕ ರಜೆ ಸೌಲಭ್ಯವಿರುವುದು.

ಶ್ರೀ ಸಿ. ಬೈರೇಗೌಡ